**ಪಿ.ಡಬ್ಲ್ಯೂ-1**

**ಹೆಸರುಃ ಗೋಣೆಪ್ಪ ಅಲಿಯಾಸ್ ಗೋಣಿಬಸಪ್ಪ ಬಿನ್ ಭರಮಪ್ಪ ಮರಿಬಸಣ್ಣನವರ**

**ದಿಃ 10.09.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**(ಮಧ್ಯಂತರ ಅರ್ಜಿ ಸಂಖ್ಯೆ 12 ರಿಂದ 14 ರ ಆದೇಶದ ಮೇರೆಗೆ)**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಪಿ.ಆರ್.ಹೆಚ್. ವಕೀಲರಿಂದ**

ಸರ್ವೇ ಸಂಖ್ಯೆ.101 ರ ಸ್ವತ್ತಿನಲ್ಲಿ ಒಟ್ಟು 4 ಹಿಸ್ಸಾಗಳು ಇರುತ್ತವೆ. ಸರ್ವೇ ಸಂಖ್ಯೆ 101 ಸ್ವತ್ತು ಪೋಡಿಯಾಗಿರುವುದಿಲ್ಲ. ಸದರಿ ಸರ್ವೇ ಸಂಖ್ಯೆ 101 ರ ಸ್ವತ್ತು ಪೋಡಿಯಾಗಿದ್ದು, ಪ್ರತಿವಾದಿಗಳು ದಾವಾ ಸರ್ವೇ ಸಂಖ್ಯೆ 101/ಸಿ ವತ್ತು 101/ಡಿ ಸ್ವತ್ತಿನಲ್ಲಿ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

2. ಸರ್ವೇ ಸಂಖ್ಯೆ. 102 ಸ್ವತ್ತು ವಾದಿ ಮತ್ತು ಪ್ರತಿವಾದಿಗಳ ಮೂಲ ವಂಶಾಸ್ಥರು ಆದ ಫಕೀರಪ್ಪ ಮರಿಬಸಣ್ಣ ನವರಿಗೆ ಸಂಬಂಧಪಟ್ಟ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಫಕೀರಪ್ಪ ನವರು ಬಿಟ್ಟು ಹೋದಂತ ಸರ್ವೇ ಸಂಖ್ಯೆ 102 ರ ಸ್ವತ್ತು 1 ರಿಂದ 7 ನೇ ವಾದಿಗಳ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಸರ್ವೇ ಸಂಖ್ಯೆ 102 ರ ಸ್ವತ್ತಿನ ಪಹಣಿ ದಾಖಲಾತಿಗಳನ್ನು ನೋಡಿದ್ದು, ಅದರಲ್ಲಿ ವಾದಿ 1 ರಿಂದ 7 ರವರ ಹೆಸರುಗಳು ಇರುವುದಿಲ್ಲ. ಸರ್ವೇ ಸಂಖ್ಯೆ 102 ರ ಸ್ವತ್ತಿನಲ್ಲಿ 1 ರಿಂದ 7 ನೇ ವಾದಿಗಳ ಹೆಸರು ಪಹಣಿ ದಾಖಲಾತಿಗಳಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಗಳು ಪಹಣಿ ದಾಖಲಾತಿಗಳಲ್ಲಿ ಇರುವಂತಹ ವಿಸ್ತೀರ್ಣ ಕ್ಕೂ

**ಪಿ.ಡಬ್ಲ್ಯೂ-1**

**ಹೆಸರುಃ ಗೋಣೆಪ್ಪ ಅಲಿಯಾಸ್ ಗೋಣೆಬಸಪ್ಪ ಬಿನ್ ಭರಮಪ್ಪ ಮರಿಬಸಣ್ಣನವರ**

ಹೆಚ್ಚಾಗಿ ಸ್ವಾಧೀನತೆಯನ್ನು ಹೊಂದಿದ್ದು, ಅದರ ಲಾಭವನ್ನುಪಡೆದುಕೊಳ್ಳುವ ಉದ್ದೇಶದಿಂದ ನಾವು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 12 ಎಕರೆ 29 ಗುಂಟೆ ಸ್ವತ್ತಿನಲ್ಲಿ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿ 12 ಎಕರೆ 29 ಗುಂಟೆ ಸ್ವತ್ತು ವರ್ಗಾವಣೆಯಾಗಿದ್ದು, ಆ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-7 ರಂತೆ ಪ್ರತಿವಾದಿಗಳು ಅವರ ಸ್ವಾಧೀನತೆಯ ವಿಸ್ತೀರ್ಣದ ಬದಲಾವಣೆಗೆ ತಹಶೀಲ್ದಾರ ಕಛೇರಿಗೆ 12.03-1996 ರಲ್ಲಿ ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ-8 ಮತ್ತು 9 ರಂತೆ 12 ಎಕರೆ 34 ಗುಂಟೆ ಸ್ವತ್ತು ಪ್ರತಿವಾದಿಗಳ ಹೆಸರಿನಲ್ಲಿ ವರ್ಗಾವಣೆ ಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಕುರಿತು ಸತ್ಯಾಂಶ ತಿಳಿದು ಬರುತ್ತದೆ ಎಂದು ನಾವು ವಾದ ಪತ್ರದಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿಗಳ ಚೆಕ್ಕು ಬಂದಿಯನ್ನು ಬರೆದಿರುವುದಿಲ್ಲವೆಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಅಸ್ತಿಗಳ ಹದ್ ನಕಾಶೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ವೆಂದರೆ ಸರಿ. ಪ್ರತಿವಾದಿಗಳ ಹೆಸರಿನಲ್ಲಿ ಪೂರ್ತಿಯಾಗಿ ಸರ್ವೇ ಸಂಖ್ಯೆ. 101 ಸಿ ಮತ್ತು 101 ಡಿ ಸ್ವತ್ತುಗಳಲ್ಲಿ ವಿಸ್ತೀರ್ಣ 12 ಎಕರೆ 29 ಗುಂಟೆ ಸ್ವತ್ತಿನ ನಮೂದು ಇಲ್ಲದ ಕಾರಣ ಅವರಿಗೆ ಸೇರಿದ ಅಸ್ತಿಯನ್ನು ಕಬಾಳಿಸುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು

**ಪಿ.ಡಬ್ಲ್ಯೂ-1**

**ಹೆಸರುಃ ಗೋಣೆಪ್ಪ ಅಲಿಯಾಸ್ ಗೋಣೆಬಸಪ್ಪ ಬಿನ್ ಭರಮಪ್ಪ ಮರಿಬಸಣ್ಣನವರ**

ಶೆಡ್ಯೂಲ್ ಬಿ ದಾವಾ ಆಸ್ತಿಯಲ್ಲಿ ಒಟ್ಟು 12 ಎಕರೆ 29 ಗುಂಟೆ ಅಸ್ತಿಯಲ್ಲಿ ಸ್ವಾಧೀನತೆಯನ್ನು ಹೋಂದಿದ್ದು ನಮ್ಮ ಆಸ್ತಿಗೆ ಯಾವುದೇ ಅಡ್ಡಿ-ಆತಂಕವನ್ನು ಉಂಟು ಪಡಿಸಿರುವುದಿಲ್ಲವೆಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಅಸ್ತಿಗೆ ಸಂಬಂಧಿಸಿದಂತೆ ಪಹಣಿಯಲ್ಲಿ ತೋರಿಸಿರುವಂತಹ ವಿಸ್ತೀರ್ಣದ ಅಸ್ತಿಯಲ್ಲಿ ನಾವು ಸ್ವಾಧೀನತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಅಳತೆ ಮಾಡಲು ಸರ್ವೇಯರ್ ಬಂದಿದ್ದರು. ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಅಳತೆ ಮಾಡಲು ಬಿಡದ ಕಾರಣ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ.

**ಮರು ವಿಚಾರಣೆ ಇರುವುದಿಲ್ಲ.**

(ಇಂದು ದಿನಾಂಕ **10.09.2025** ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ನ್ಯಾಯಾಧೀಶರು, ಕೊಪ್ಪಳ.**